ಗರ್ಭಾಶಯದ ಕ್ಯಾನ್ಸರ್ ಎಂಬ ಮಹಾ ರೋಗ. ಆಕೆಯ ಗಂಡ ಒಬ್ಬ ಬೇಜವಾಬ್ದಾರಿ. ಆಕೆಗೆ ಏಳು ಮಕ್ಕಳನ್ನು ದಯಪಾಲಿಸಿ ದೇಶಾಂತರ ಹೋಗಿದ್ದಾನೆ. ಆಕೆಯ ಜೀವನ ನಿರ್ವಹಣೆಯ ಜವಾಬ್ದಾರಿ ಚಾಚಾನ ತಲೆಯ ಮೇಲೆ ಇದೆ. ಈತನ ತಲೆದಂಡವಾದರೆ ಅವರನ್ನು ನೋಡಿಕೊಳ್ಳುವವರು ಯಾರು? ಇದಕ್ಕೆಲ್ಲ ಕಾರಣ ಪುರುಷ ತಾನಾದೆನೇ? ಮನಸ್ಸು ಮುದುಡಿಕೊಂಡಿತ್ತು. ಈ ದಿನ ರಜೆಯ ದಿನವಾದುದ್ದರಿಂದ ಶುಭಾಂಕರ ಹೇಳಿದ್ದ, 'ಖುರೇಶಿಯವರ ಸೇಬಿನ ತೋಟಕ್ಕೆ ಹೋಗೋಣ ಅವರು ಬಹಳ ದಿನದಿಂದಲೂ ಕರೆಯುತ್ತಿದ್ದಾರೆ' ಎಂದು. ನನಗೂ ಹೋಗಬೇಕೆಂದು ಅನ್ನಿಸಿದರೂ ಹೋಗಲಿಲ್ಲ. ಏಕೆಂದರೆ ಅವನ ಜೊತೆ ಜೋಯ್ ಸಹ ಹೋಗುವವನಿದ್ದಾನೆಂದು ಗೊತ್ತಾದ ತಕ್ಷಣವೇ ತಾನು ಹೋಗುವುದು ತರವಲ್ಲ ಎಂದುಕೊಂಡ.

ಹಿಮ ಜುಮುರು ಮಳೆಯಂತೆ ಸುರಿಯುತ್ತಿತ್ತು. ತಣ್ಣನೆಯ ಈ ನಾಡಿನಲ್ಲಿ ತಮ್ಮಂತವರು ಯಾವಾಗಲೂ ಬೆಂಕಿಯುಗುಳುವ ಬಂದೂಕುಗಳನ್ನು ಹೆಗಲಿಗೇರಿಸಿಕೊಂಡು ಅಡ್ಡಾಡುವ ವೈಪರೀತ್ಯಕ್ಕೆ ಬೆರಗಾಗಿತ್ತು ಮನ. ಆದರೆ ವಿಚಾರಣೆ ಎದುರಿಸುವ ಸಮಯದಲ್ಲಿ ಬಂದೂಕು ಮುಟ್ಟುವ ಕರ್ಮ ಈಗಂತೂ ಇಲ್ಲ. ಅವರ ಜೊತೆ ಇರಬಹುದು, ಮಾತಾಡಬಹುದು, ನಗಬಹುದು, ವಾಸಿಸಬಹುದು. ಆದರೆ, ಕೆಲಸಕ್ಕೆ ಹಾಜರಾಗುವಂತೆ ಇಲ್ಲ. ಇದು ತನಗೆ ಡಾರ್ಮೆನ್ಸಿ ಪಿರಿಯಡ್. ವಿಚಾರಣೆ, ವಿಚಾರಣೆ, ವಿಚಾರಣೆ. ಸೈನಿಕ ಕೋರ್ಟು ಸಹ ಮಿಲಿಟರಿಯ ವಿನ್ಯಾಸದಿಂದ ಹೊರತಾಗಿಲ್ಲ ಎನ್ನಿಸಿತು ನನಗೆ. ಎಂತಹ ವಿಚಾರಣೆ ಅದು. ಕೈಕಟ್ಟಿಕೊಳ್ಳುವಂತಿಲ್ಲ, ಸೀದಾ ನಿಲ್ಲುವಂತಿಲ್ಲ, ಮೈಮರೆತು ನಿಲ್ಲುವಂತಿಲ್ಲ. ಕಲಾತ್ಮಕ ಸಿನಿಮಾದಂತಹ ಮಾತುಗಳು ಆಗೊಂದೋ ಈಗೊಂದೋ 'ನಮ್ಮ ದೇಶದ ರಕ್ಷಣಾ ವ್ಯವಸ್ಥೆಯ ಮಾಹಿತಿ ಆ ದೇಶಕ್ಕೆ ರವಾನಿಸಿದ ಅಪಾದನೆ ನಿನ್ನ ಮೇಲಿದೆ. ನನ್ನ ಕ್ಯಾಂಪಿನಲ್ಲೆ ಎಷ್ಟು ಜನರಿರುತ್ತಾರೆ ಎನ್ನುವ ಸತ್ಯ ತನಗಿನ್ನೂ ಗೊತ್ತಿಲ್ಲದೆ ಇರುವಾಗ ಅಂತಹದ್ದು ನಾನು ಹೇಗೆ ಮಾಡಲಿ ಮೈಲಾರ್ಡ್. ಸರ್ 'ರಾಜತರಂಗಣಿ' ಮಾಹಿತಿಯಂತಾದರೆ ಅದಕ್ಕಿಂತ ದೇಶಭಕ್ತಿಯ ಮಾಹಿತಿ ಇನ್ನಾವುದಿದೆ. ಅದು ಅಲ್ಲದೆ ಪರ್ಶಿಯನ್ ಭಾಷೆಯ 'ರಾಜತರಂಗಿಣಿ'ಯನ್ನು ಹೆಮ್ಮೆಯಿಂದ ನನಗೆ ಕೊಟ್ಟವನು ಚಾಚಾ.

'ಚಾಚಾ ಅಂದರೆ ವಿರೋಧಿ ರಾಷ್ಟ್ರದ ಸೈನಿಕ. ಸೈನಿಕನಿಗೂ ನಿನಗೂ ಏನು ಸಂಬಂಧ? ವಿಚಿತ್ರವೆನ್ನಿಸುತ್ತಿದೆ. ದಿನಾಲೂ ಮಾತಾಡುವುದರ ಹಿಂದಿನ ಮುಖವಾಡಗಳು ಯಾವುದು. 'ಅವನಲ್ಲಿ ತನ್ನಲ್ಲಿ ಮೂಡಿದ್ದು ವಿರೋಧ- ಪರ ಭಾವನೆಗಳಲ್ಲ ಸರ್, ಸಹಜ ಮನುಷ್ಯ ಮನುಷ್ಯರಲ್ಲಿ ಒಡಮೂಡಿದ ಭಾವಗಳು, ಅಲ್ಲಿ ನಾನು ಭಾರತೀಯನಲ್ಲ, ಅವನು ಪಾಕಿಸ್ತಾನಿಯಾಗಿದ್ದಿಲ್ಲ, ಸಾಮಾನ್ಯ ಮನುಷ್ಯರು ಮಾತ್ರ... ಆಗ ಮಾತಾಡುತ್ತಲೇ ಸಂಬಂಧಗಳ ಅನ್ವೇಷಿಸಿಕೊಟ್ಟಿತ್ತು ಸಂವಹನ. ಆ ಸಂವಹನವೇ ನಮ್ಮನ್ನು ಸಂಬಂಧಗಳ ಬೇರಿಗೆ ಕರೆದುಕೊಂಡುಹೋಗಿದೆ' ಎನ್ನಬೇಕೆಂದವನಿಗೆ 'ಸರ್ ನಾನು ಮಾತಾಡಿದ್ದು ಸೈನಿಕನ ಜೊತೆ ಮಾತ್ರ' ಅನ್ನಲು ಮಾತ್ರ ಸಾಧ್ಯವಾಯಿತು.

'ನಮಗೆ ತಿಳಿವಳಿಕೆ ಹೇಳಲು ಬರಬೇಡ. ಅಲ್ಲಿ ಇರುವವರೆಲ್ಲ ಉಗ್ರಗಾಮಿಗಳೇ. ಅವರಾರು ಸೈನಿಕರಲ್ಲ. ಇರಲಿ ಅತನಿಗೂ ನಿನಗೂ ಏನು ಸಂಬಂಧ ಹೇಳು?'.

'ಏನು ಹೇಳುವುದು ಸರ್ ಆತ ನನ್ನ ಚಾಚಾ.'

'ಚಾಚಾನೆಂದರೆ ನಿಮ್ಮಪ್ಪನ ತಮ್ಮನೆ?'

ಇರಬಹುದು, ಹಳೆಯ ಸಂಬಂಧಗಳ ಹೆಜ್ಜೆಗಳನ್ನು ಸಾಕ್ಷಿಗಳ ಒರೆಗಲ್ಲಿಗೆ ಹಚ್ಚಲು ಸಾಧ್ಯವಿಲ್ಲ. ನಮ್ಮ ಮುತ್ತಾತನ ತಮ್ಮನೊಬ್ಬ ಹಜರತ್ ಖ್ವಾಜಾ ಬಂದೇನವಾಜರು ತಪಸ್ಸು ಮಾಡಿದ ಸ್ಥಳವಾದ ಗವಿಯಲ್ಲಿ ಪ್ರತಿದಿನ ಪದ್ಯಗಳ ಹಾಡುತ್ತ ಗಾಂಜಾ ಸೇದುತ್ತಾ ಡಪ್ಪು ಬಾರಿಸುತ್ತ ತಿರುಗುತ್ತಿದ್ದನಂತೆ. ಅದಕ್ಕಾಗಿಯೇ ಆತನನ್ನು ಮನೆಯಿಂದ ಹೊರಗೆ ಹಾಕಲಾಯಿತಂತೆ. ಆತ ಯಾರೋ ಒಬ್ಬ ಸೂಫಿಸಂತನ ಜೊತೆ ದೆಹಲಿಗೆ ಹೋದನಂತೆ. ಆತ ಅಲ್ಲೇ ಕಾಯಂ ಆಗಿ ದೆಹಲಿಯಲ್ಲಿಯೇ ವಾಸಿಸುತ್ತಿದ್ದನಂತೆ. ದೆಹಲಿಯಿಂದ ವರ್ಷಕ್ಕೊಮ್ಮೆ ಬಂದೇನವಾಜರ ಜಾತ್ರೆಯ ಸಂದರ್ಭದಲ್ಲಿ ಬರುತ್ತಿದ್ದನಂತೆ. ಕೆಲದಿನಗಳಲ್ಲಿ ಅಲ್ಲಿಯೇ ಮದುವೆ ಆದನಂತೆ ಮತ್ತೆ ಕಲಬುರ್ಗಿಗೆ ಬರುವುದು ನಿಲ್ಲಿಸಿದನಂತೆ ಎಂದು ಅಜ್ಜಿ ಹೇಳುತ್ತಿದ್ದಳು. ಅದೇ ವಂಶದವರು ಮುಂದೆ ದೇಶ ವಿಭಜನೆಯಾದಾಗ ಪಾಕಿಸ್ತಾನಕ್ಕೆ ಹೋದರಂತೆ, ಈಗಲೂ ಅವರ ಹೆಸರಿನ